ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 219-226
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಭಿವೃದ್ಧಿ ನಿಗಮಗಳ ಮಹತ್ವ: ಕರ್ನಾಟಕದ ಒಂದು ವಿಶ್ಲೇಷಣಾತ್ಮಕ ಅಧ್ಯಯನ

**ಅರಸೀಕರೆ ಮೇಘರಾಜ**[1] **ಮತ್ತು ಪ್ರೊ.ಕೃಷ್ಣ ಹೊಂಬಾಳ್**[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

***Abstract:***
*ಭಾರತವು ವೈವಿಧ್ಯಮಯ ಸಾಮಾಜಿಕ ರಚನೆಯನ್ನು ಹೊಂದಿರುವ ದೇಶವಾಗಿದ್ದು, ವಿವಿಧ ಸಮುದಾಯಗಳ ಮಧ್ಯೆ ಪರಿಶಿಷ್ಟ ಪಂಗಡಗಳು ವಿಶೇಷ ಸ್ಥಾನವನ್ನು ಹೊಂದಿವೆ. ಐತಿಹಾಸಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಪರಿಶಿಷ್ಟ ಪಂಗಡದ ಸಮುದಾಯಗಳು ದೀರ್ಘಕಾಲದಿಂದ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಸ್ಥಿತಿಯಲ್ಲಿ ಉಳಿದಿವೆ. ಈ ಹಿನ್ನೆಲೆಯಲ್ಲಿಯೇ ಸರ್ಕಾರವು ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಕಲ್ಯಾಣ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿದೆ. ಈ ನೀತಿಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಅಭಿವೃದ್ಧಿ ನಿಗಮಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಲೇಖನವು ಕರ್ನಾಟಕ ರಾಜ್ಯವನ್ನು ಉದಾಹರಣೆಯಾಗಿ ತೆಗೆದುಕೊಂಡು ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ನೀತಿಗಳ ಅನುಷ್ಠಾನದಲ್ಲಿ ಅಭಿವೃದ್ಧಿ ನಿಗಮಗಳ ಮಹತ್ವವನ್ನು ವಿಶ್ಲೇಷಿಸುತ್ತದೆ. ವಿಶೇಷವಾಗಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮೂಲಕ ಜಾರಿಗೆ ಬರುತ್ತಿರುವ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಸಮಗ್ರ ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆ ಹಾಗೂ ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆಗಳಂತಹ ಪ್ರಮುಖ ಕಾರ್ಯಕ್ರಮಗಳನ್ನು ಅಧ್ಯಯನ ಮಾಡಲಾಗಿದೆ. ಅಭಿವೃದ್ಧಿ ನಿಗಮಗಳು ಸರ್ಕಾರದ ಕಲ್ಯಾಣ ನೀತಿಗಳನ್ನು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ತಲುಪಿಸುವ ಪ್ರಮುಖ ಸಂಸ್ಥೆಗಳಾಗಿದ್ದು, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಗುರಿಗಳನ್ನು ಸಾಧಿಸಲು ಅವುಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ.*

***Keywords:*** *ಪರಿಶಿಷ್ಟ ಪಂಗಡಗಳು, ಕಲ್ಯಾಣ ನೀತಿಗಳು, ಅಭಿವೃದ್ಧಿ ನಿಗಮಗಳು, ಆರ್ಥಿಕ ಸಬಲೀಕರಣ, ಕರ್ನಾಟಕ.*

## ಪೀಠಿಕೆ

ಭಾರತವು ವೈವಿಧ್ಯಮಯ ಸಾಮಾಜಿಕ ರಚನೆಯನ್ನು ಹೊಂದಿರುವ ದೇಶವಾಗಿದ್ದು, ವಿವಿಧ ಜಾತಿ, ಪಂಗಡ ಹಾಗೂ ಸಾಂಸ್ಕೃತಿಕ ಸಮುದಾಯಗಳೊಂದಿಗೆ ತನ್ನ ಸಮಾಜವನ್ನು ನಿರ್ಮಿಸಿಕೊಂಡಿದೆ. ಈ ಸಮಾಜದಲ್ಲಿ ಪರಿಶಿಷ್ಟ ಪಂಗಡಗಳು ವಿಶೇಷ ಸ್ಥಾನವನ್ನು ಹೊಂದಿದ್ದರೂ, ಐತಿಹಾಸಿಕ, ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಅವುಗಳು ಬಹುಕಾಲದಿಂದ ಅಭಿವೃದ್ಧಿಯ ಮುಖ್ಯವಾಹಿನಿಯಿಂದ ದೂರವಾಗಿರುವುದು ಗಮನಾರ್ಹವಾಗಿದೆ. ಶಿಕ್ಷಣದ

***Please cite this article as:*** ಅರಸೀಕರೆ ಮೇಘರಾಜ ಮತ್ತು ಕೃಷ್ಣ ಹೊಂಬಾಳ್. (2026). ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಭಿವೃದ್ಧಿ ನಿಗಮಗಳ ಮಹತ್ವ: ಕರ್ನಾಟಕದ ಒಂದು ವಿಶ್ಲೇಷಣಾತ್ಮಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೊವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 219–226

ಕೊರತೆ, ಆರ್ಥಿಕ ಹಿಂದುಳಿದಿರುವಿಕೆ, ಆರೋಗ್ಯ ಸೌಲಭ್ಯಗಳ ಅಭಾವ, ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಭೌಗೋಳಿಕ ಪ್ರತ್ಯೇಕತೆ ಇವುಗಳು ಪರಿಶಿಷ್ಟ ಪಂಗಡ ಸಮುದಾಯಗಳ ಅಭಿವೃದ್ಧಿಗೆ ಅಡ್ಡಿಯಾಗಿರುವ ಪ್ರಮುಖ ಅಂಶಗಳಾಗಿವೆ.

ಭಾರತೀಯ ಸಂವಿಧಾನವು ಸಾಮಾಜಿಕ ನ್ಯಾಯದ ತತ್ವವನ್ನು ಆಧಾರವಾಗಿ ತೆಗೆದುಕೊಂಡು ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ವ್ಯವಸ್ಥೆಗಳನ್ನು ಕಲ್ಪಿಸಿದೆ. ಸಂವಿಧಾನದ ವಿವಿಧ ವಿಧಿಗಳು ಪರಿಶಿಷ್ಟ ಪಂಗಡ ಸಮುದಾಯಗಳ ರಕ್ಷಣೆ ಮತ್ತು ಕಲ್ಯಾಣವನ್ನು ಉತ್ತೇಜಿಸುವ ಉದ್ದೇಶದಿಂದ ರೂಪಿಸಲ್ಪಟ್ಟಿವೆ. ಇದರ ಅನುಸಾರವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಕಲ್ಯಾಣ ಯೋಜನೆಗಳು, ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಸಬಲೀಕರಣ ನೀತಿಗಳನ್ನು ಜಾರಿಗೆ ತಂದಿವೆ. ಈ ಯೋಜನೆಗಳ ಮುಖ್ಯ ಉದ್ದೇಶ ಪರಿಶಿಷ್ಟ ಪಂಗಡ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ.

ಈ ನೀತಿಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರವು ವಿವಿಧ ಸಂಸ್ಥಾತ್ಮಕ ವ್ಯವಸ್ಥೆಗಳನ್ನು ರೂಪಿಸಿದೆ. ವಿಶೇಷವಾಗಿ ರಾಜ್ಯ ಮಟ್ಟದಲ್ಲಿ ಸ್ಥಾಪಿತವಾಗಿರುವ ಅಭಿವೃದ್ಧಿ ನಿಗಮಗಳು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಗಮಗಳು ಸಾಲ, ಸಹಾಯಧನ, ತರಬೇತಿ, ಕೌಶಲ್ಯಾಭಿವೃದ್ಧಿ ಹಾಗೂ ಸ್ವಯಂ ಉದ್ಯೋಗ ಅವಕಾಶಗಳನ್ನು ಒದಗಿಸುವ ಮೂಲಕ ಸಮುದಾಯದ ಆರ್ಥಿಕ ಸಬಲೀಕರಣವನ್ನು ಉತ್ತೇಜಿಸುತ್ತವೆ. ಜೊತೆಗೆ ಕೃಷಿ, ಸಣ್ಣ ಉದ್ಯಮ, ಸ್ವ-ಉದ್ಯೋಗ ಹಾಗೂ ಉದ್ಯಮಶೀಲತಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಮೂಲಕ ಸಮಾಜದ ಹಿಂದುಳಿದ ವರ್ಗಗಳನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸುವಲ್ಲಿ ಸಹಾಯ ಮಾಡುತ್ತವೆ.

ಈ ಹಿನ್ನೆಲೆಯಲ್ಲಿಯೇ "ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಭಿವೃದ್ಧಿ ನಿಗಮಗಳ ಮಹತ್ವ: ಕರ್ನಾಟಕದ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ವಿಷಯವನ್ನು ಆಧಾರವಾಗಿ ತೆಗೆದುಕೊಂಡು ಈ ಸಂಶೋಧನಾ ಲೇಖನವನ್ನು ರೂಪಿಸಲಾಗಿದೆ. ಈ ಅಧ್ಯಯನವು ಅಭಿವೃದ್ಧಿ ನಿಗಮಗಳ ಕಾರ್ಯಪದ್ಧತಿ, ಅವುಗಳ ಮೂಲಕ ಜಾರಿಗೆ ಬರುವ ಯೋಜನೆಗಳು ಹಾಗೂ ಅವುಗಳಿಂದ ಪರಿಶಿಷ್ಟ ಪಂಗಡ ಸಮುದಾಯಗಳಿಗೆ ಉಂಟಾಗುವ ಪರಿಣಾಮಗಳನ್ನು ವಿಶ್ಲೇಷಿಸುವುದನ್ನು ಉದ್ದೇಶವಾಗಿಸಿಕೊಂಡಿದೆ. ಜೊತೆಗೆ ಈ ಅಧ್ಯಯನವು ಅಭಿವೃದ್ಧಿ ನಿಗಮಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಾಧ್ಯವಾಗುವ ಕ್ರಮಗಳನ್ನು ಸೂಚಿಸುವುದರ ಮೂಲಕ ಭವಿಷ್ಯದ ನೀತಿ ರೂಪಣೆಗೆ ಮಾರ್ಗದರ್ಶನ ನೀಡಲು ಸಹ ಸಹಾಯವಾಗುತ್ತದೆ.

**ಅಧ್ಯಯನದ ಉದ್ದೇಶಗಳು**

ಈ ಅಧ್ಯಯನದ ಪ್ರಮುಖ ಉದ್ದೇಶಗಳು ಕೆಳಗಿನಂತಿವೆ:

1. ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ನೀತಿಗಳ ಸ್ವರೂಪವನ್ನು ವಿಶ್ಲೇಷಿಸುವುದು.
2. ಅಭಿವೃದ್ಧಿ ನಿಗಮಗಳ ಕಾರ್ಯಪದ್ಧತಿಯನ್ನು ಅಧ್ಯಯನ ಮಾಡುವುದು.
3. ಪರಿಶಿಷ್ಟ ಪಂಗಡ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ನಿಗಮಗಳ ಕೊಡುಗೆಯನ್ನು ಪರಿಶೀಲಿಸುವುದು.
4. ಕಲ್ಯಾಣ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಸಮಸ್ಯೆಗಳನ್ನು ಗುರುತಿಸುವುದು.
5. ಅಭಿವೃದ್ಧಿ ನಿಗಮಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸೂಕ್ತ ಸಲಹೆಗಳನ್ನು ನೀಡುವುದು.

**ಅಧ್ಯಯನದ ಅಗತ್ಯತೆ**

ಭಾರತದಲ್ಲಿ ಪರಿಶಿಷ್ಟ ಪಂಗಡ ಸಮುದಾಯಗಳು ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಅವಕಾಶಗಳಲ್ಲಿ ಇನ್ನೂ ಹಿಂದುಳಿದ ಸ್ಥಿತಿಯಲ್ಲಿ ಇವೆ. ವಿಶೇಷವಾಗಿ ಗ್ರಾಮೀಣ ಹಾಗೂ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳು ಮೂಲಭೂತ ಸೌಲಭ್ಯಗಳ ಕೊರತೆಯನ್ನು ಅನುಭವಿಸುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಅವುಗಳ ಪರಿಣಾಮಕಾರಿತ್ವವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಅಭಿವೃದ್ಧಿ ನಿಗಮಗಳು ಈ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿರುವುದರಿಂದ ಅವುಗಳ ಕಾರ್ಯಕ್ಷಮತೆಯನ್ನು ಅಧ್ಯಯನ ಮಾಡುವುದು ಅತ್ಯಂತ ಮಹತ್ವದ್ದಾಗಿದ್ದು ಜೊತೆಗೆ ಅಭಿವೃದ್ಧಿ ನಿಗಮಗಳ ಕಾರ್ಯಪದ್ಧತಿ ಮತ್ತು ಅವುಗಳ ಪರಿಣಾಮವನ್ನು ವಿಶ್ಲೇಷಿಸುವ ಮೂಲಕ ಮುಂದಿನ ನೀತಿ ರೂಪಣೆಗೆ ಮಾರ್ಗದರ್ಶನ ನೀಡುತ್ತದೆ. ಅದರೊಂದಿಗೆ, ಈ ಅಧ್ಯಯನವು ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ ಮತ್ತು ರಾಜಕೀಯ ವಿಜ್ಞಾನ, ರಾಜಕೀಯ ಮಾನವಶಾಸ್ತ್ರ ಕ್ಷೇತ್ರಗಳಲ್ಲಿ ಅಧ್ಯಯನ ನಡೆಸುವ ಸಂಶೋಧಕರಿಗೆ ಸಹ ಉಪಯುಕ್ತವಾಗುತ್ತದೆ.

**ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಯೋಜನೆಗಳು**

***ಸ್ವಯಂ ಉದ್ಯೋಗ ನೇರಸಾಲ ಯೋಜನೆ***

ಪರಿಶಿಷ್ಟ ಪಂಗಡದ ನಿರುದ್ಯೋಗ ಯುವಕ/ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯ 50%ರಷ್ಟು ಗುರಿಯಲ್ಲಿ ಹೈನುಗಾರಿಕೆ ಮತ್ತು ಉಳಿದ 50% ರಷ್ಟು ಗುರಿಯಲ್ಲಿ ತರಕಾರಿ ಹಣ್ಣು, ಹಂಪಲು, ಮೀನು–ಮಾಂಸ ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ/ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಇತ್ಯಾದಿ ಉದ್ದೇಶದ ಸೌಲಭ್ಯಗಳಿಗಾಗಿ ಘಟಕ ವೆಚ್ಚ ರೂ. 1,00,000/–ದಲ್ಲಿ ಶೇ.50ರಷ್ಟು ಸಾಲ ಮತ್ತು ಶೇ.50ರಷ್ಟು ಸಹಾಯಧನದ ಮೂಲಕ ಅನುಷ್ಠಾನಗೊಳಿಸುವುದು. (ಸಹಾಯಧನ ರೂ.50,000/– ಮತ್ತು ಸಾಲ ರೂ. 50,000/– ಗಳು) ಫಲಾನುಭವಿಗಳಿಗೆ 2 ಕಂತುಗಳಲ್ಲಿ ಪಾವತಿಸಲಾಗುವುದು. ಸಾಲವನ್ನು ನಿಗಮದ ಮೂಲಕ ಶೇ4 ರಷ್ಟು ಬಡ್ಡಿ ದರದಲ್ಲಿ ವಿಧಿಸಲಾಗುತ್ತದೆ.

***ಉದ್ಯಮಶೀಲತ ಅಭಿವೃದ್ಧಿ ಯೋಜನೆ***

ಪರಿಶಿಷ್ಟ ಪಂಗಡದ ನಿರುದ್ಯೋಗಿ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯ ಗುರಿಯಲ್ಲಿ ಟೈಲರಿಂಗ್, ಫ್ಯಾಷನ್, ಡಿಸೈನಿಂಗ್, ಬ್ಯೂಟಿಕ್, ಪೇಪರ್ ಪ್ಲೇಟ್ ಮೇಕಿಂಗ್, ಕೋಲ್ಡ್ ಪ್ರೆಸಿಂಗ್ ಆಯಿಲ್ ಇತ್ಯಾದಿ ಉದ್ದೇಶದ ಸೌಲಭ್ಯಗಳಿಗಾಗಿ ಗರಿಷ್ಟ ಘಟಕ ವೆಚ್ಚ ರೂ. 2,00,000/– ಗಳ ಸಹಾಯಧನ ನೀಡುವ ಮೂಲಕ ಅನುಷ್ಠಾನಗೊಳಿಸಲಾಗುವುದು.

***ಸ್ವಾವಲಂಬಿ ಸಾರಥಿ ವಾಹನ ಯೋಜನೆ***

ಪರಿಶಿಷ್ಟ ಪಂಗಡದ ನಿರುದ್ಯೋಗ ಯುವಕ/ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯಡಿ ಗರಿಷ್ಟ ರೂ. 4,00,000 (ಲಕ್ಷ) ಸಹಾಯಧನವನ್ನು ಹಾಗೂ ಘಟಕ ವೆಚ್ಚದ ಉಳಿದ ಭಾಗ ಬ್ಯಾಂಕ್ ಸಾಲದೊಂದಿಗೆ ಸರಕು ಸಾಗಾಣಿಕೆ ವಾಹನ ಸಾರಿಗೆ ವಾಹನ ಟ್ರಾಕ್ಟರ್ ಹಾಗೂ ಇತರೆ ವ್ಯಾಪಾರ ಉದ್ದೇಶಗಳಿಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

***ಉದ್ಯಮಶೀಲತ ಅಭಿವೃದ್ಧಿ ಯೋಜನೆ (ಹೈನುಗಾರಿಕೆ)***

2025–26ನೇ ಸಾಲಿನಿಂದ ಪರಿಶಿಷ್ಠ ಪಂಗಡದ ಫಲಾನುಭವಿಗಳು ಹೈನುಗಾರಿಕೆ ಕೈಗೊಂಡು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಲುವಾಗಿ 2 ಎಮ್ಮೆ / ಹಸುಗಳಿಗೆ ಘಟಕ ವೆಚ್ಚದ ಶೇ.50ರಷ್ಟು

ಅಥವಾ ಗರಿಷ್ಟ 1.25 ಲಕ್ಷ ರೂ.ಗಳನ್ನು ನಿಗಮದ ಮೂಲಕ ನೀಡಲಾಗುವುದು.

***ಸಮಗ್ರ ಗಂಗಾ ಕಲ್ಯಾಣ ಯೋಜನೆ***

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಿಗೆ ರೂ. 4.75 ಲಕ್ಷಗಳ ಘಟಕ ವೆಚ್ಚದಂತೆ (ರೂ.3.50 ಲಕ್ಷಗಳ ಸಹಾಯಧನ ರೂ. 50.000 ಅವಧಿ ಸಾಲವಾಗಿದ್ದು ಹಾಗೂ ರೂ.75,000/– ವಿದ್ಯುದ್ದೀಕರಣ ವೆಚ್ಚವಾಗಿರುತ್ತದೆ) ಉಳಿದ 24 ಜಿಲ್ಲೆಗಳಿಗೆ ರೂ. 3.75 ಲಕ್ಷಗಳ ಘಟಕ ವೆಚ್ಚದಂತೆ (ರೂ.2.50 ಲಕ್ಷಗಳ ಸಹಾಯಧನ ರೂ. 50,000/– ಅವಧಿ ಸಾಲವಾಗಿದ್ದು ಹಾಗೂ ರೂ. 75,000/– ವಿದ್ಯುದ್ದೀಕರಣ ವೆಚ್ಚವಾಗಿರುತ್ತದೆ.) ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆಯ ಸೌಲಭ್ಯ ಕಲ್ಪಿಸಲು ನೈಸರ್ಗಿಕವಾಗಿ ಹರಿಯುವ ನದಿ, ತೊರೆ, ಹಳ್ಳ, ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತೀಸಣ್ಣ ರೈತರುಗಳು ಹೊಂದಿರುವ ಜಮೀನುಗಳಿಗೆ ಪೈಪ್‌ಲೈನ್ ಅಳವಡಿಸಿ, ಪಂಪ್‌ಸೆಟ್, ಸರಬರಾಜು ಮಾಡಿ ಅಳವಡಿಸಿ, ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ಉಚಿತವಾಗಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ ಕನಿಷ್ಠ 3 ಅಥವಾ 4 ಕ್ಕಿಂತ ಹೆಚ್ಚಿನ ಫಲಾನುಭವಿಗಳು ಇದ್ದಲ್ಲಿ ಹಾಗೂ 8.00 ಎಕರೆಗಳಿಂದ ಗರಿಷ್ಠ 15.00 ಎಕರೆಗಳವರೆಗೆ ಈಗಿರುವ ಸಹಾಯಧನದ ಮಿತಿಯೊಳಗೆ ಸಾಮೂಹಿಕ ಏತ ನೀರಾವರಿ ಕಾಮಗಾರಿಕೆ ವಿದ್ಯುತ್ ಸಂಪರ್ಕ ಮತ್ತು ನಿರ್ವಹಣೆಗಾಗಿ ತಗಲುವ ವೆಚ್ಚ ಸೇರಿದಂತೆ ಒಟ್ಟು ರೂ. 9.00 ಲಕ್ಷಗಳ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗುವುದು.

***ಭೂ ಒಡೆತನ ಯೋಜನೆ***

ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರನ್ನು ಭೂ ಒಡೆಯರನ್ನಾಗಿ ಮಾಡುವ ಉದ್ದೇಶ ಹೊಂದಲಾಗಿರುತ್ತದೆ. ಖರೀದಿಸುವ ಜಮೀನು ಫಲಾಪೇಕ್ಷಿಯ ವಾಸಿಸುವ ಸ್ಥಳದಿಂದ 10 ಕಿಮೀ ವ್ಯಾಪ್ತಿಯಲ್ಲಿರಬೇಕು. ಘಟಕ ವೆಚ್ಚದ ಮಿತಿಯೊಳಗೆ ಕನಿಷ್ಟ 2.00 ಎಕರೆ ಖುಷ್ಕಿ, 1.00 ಎಕರೆ ನೀರಾವರಿ, 1/2 ಎಕರೆ ಭಾಗಾಯ್ತು ಖರೀದಿಸಿ ಭೂ–ರಹಿತ ಮಹಿಳಾ ಕೃಷಿ ಕಾರ್ಮಿಕರ ಹೆಸರಿನಲ್ಲಿ ನೋಂದಾಯಿಸಲಾಗುವುದು. ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿಯನ್ನು ನೀಡುವ ಅಧಿಕಾರವನ್ನು ಆಯಾ ಜಿಲ್ಲೆಯಲ್ಲಿನ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ, ಬೆಂಗಳೂರು ದಕ್ಷಿಣ(ರಾಮನಗರ) ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಈ ಯೋಜನೆಯಡಿ ಘಟಕ ವೆಚ್ಚವನ್ನು ರೂ. 25.00 ಲಕ್ಷಗಳು ಮತ್ತು ಉಳಿದ 26 ಜಿಲ್ಲೆಗಳಲ್ಲಿ ಘಟಕ ವೆಚ್ಚವನ್ನು ರೂ. 20.00 ಲಕ್ಷಗಳಿಗೆ ನಿಗದಿಪಡಿಸಲಾಗಿರುತ್ತದೆ. ಒಟ್ಟು ಘಟಕ ವೆಚ್ಚದಲ್ಲಿ ಶೇ.50 ರಷ್ಟು ಸಹಾಯಧನ ಮತ್ತು ಶೇ.50 ರಷ್ಟು ಅವಧಿಸಾಲವಾಗಿರುತ್ತದೆ. ಅವಧಿಸಾಲವನ್ನು ನಿಗಮದಿಂದಲೇ ಭರಿಸಲಾಗುತ್ತದೆ. ಇದಕ್ಕೆ ವಾರ್ಷಿಕ ಶೇ.6ರ ಬಡ್ಡಿ ದರದಲ್ಲಿ ವಿಧಿಸಲಾಗುತ್ತದೆ. ಸಾಲ ಮತ್ತು ಬಡ್ಡಿಯನ್ನು 10 ವರ್ಷಗಳ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ. ಜಮೀನು ಮಾರಾಟ ಮಾಡುವ ಭೂ ಮಾಲೀಕರು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬಾರದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯು ಜಮೀನಿನ ದರವನ್ನು ನಿಗದಿಪಡಿಸುತ್ತದೆ.

***ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ***

ನಿಗಮವು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ರಚಿಸಿಕೊಂಡಿರುವ ನೋಂದಾಯಿತ ಸ್ವ–ಸಹಾಯ ಸಂಘದ ಸದಸ್ಯರುಗಳಿಗೆ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣಗೊಳಿಸುವ

ಗುಂಪು ಚಟುವಟಿಕೆಗಳು ಉದ್ದೇಶಕ್ಕಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಪರಿಶಿಷ್ಟ ಪಂಗಡದ 10 ಅಥವಾ ಹೆಚ್ಚಿನ ಮಹಿಳಾ ಸದಸ್ಯರನ್ನು ಹೊಂದಿರುವ ನೋಂದಾಯಿತ ಸ್ವ–ಸಹಾಯ ಸಂಘಕ್ಕೆ ಪ್ರತಿ ಸದಸ್ಯರಿಗೆ ರೂ. 25,000/–ಸಹಾಯಧನ ಮತ್ತು ರೂ. 25,000/– ಸಾಲ ಒಟ್ಟಾರೆ ರೂ. 50,000/–ಗಳಂತೆ ಒಂದು ಸಂಘಕ್ಕೆ ಗರಿಷ್ಠ ರೂ. 5,00 ಲಕ್ಷ ಅನುದಾನವನ್ನು ಒದಗಿಸಲಾಗುವುದು ಸಾಲವನ್ನು ನಿಗಮದಿಂದ ನೀಡಲಾಗುತ್ತಿದ್ದು, ವಾರ್ಷಿಕ ಶೇ.4% ಬಡ್ಡಿ ದರದಲ್ಲಿ ವಿಧಿಸಲಾಗುತ್ತಿದ್ದು, 36 ಮಾಸಿಕ ಸಮಯದಕ್ಕು ಇದಕ್ಕೆ ಕಂತುಗಳಲ್ಲಿ ಸಾಲವನ್ನು ನಿಗಮಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ.

**ದತ್ತಾಂಶದ ಮೂಲಗಳು,** ಸರ್ಕಾರಿ ವಾರ್ಷಿಕ ವರದಿಗಳು, ಜನಗಣತಿ, ಅಂಕಿಅಂಶಗಳು ಸಂಶೋಧನಾ ಲೇಖನಗಳು, ಇಲಾಖಾ ಪ್ರಕಟಣೆಗಳು

**ಅಧ್ಯಯನ ವಿಧಾನ**

ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನಗಳನ್ನು ಉಪಯೋಗಿಸಿ ದ್ವಿತೀಯಕ ದತ್ತಾಂಶಗಳ ಆಧಾರದ ಮೇಲೆ ನಡೆಸಲಾಗಿದೆ.

**ಕೊಷ್ಟಕ 1: ನಿಗಮದ ವಿವಿಧ ಯೋಜನೆಗಳಿಂದ 2010–2020 ಸಾಲಿನಲ್ಲಿ ಲಾಭ ಪಡೆದವರ ಏರಿಕೆ ಮಾಹಿತಿಯ ದತ್ತಾಂಶಗಳ ವಿವರ**

| ಕ್ರಮ. ಸಂ. | ವರ್ಷ | ಕರ್ನಾಟಕದ ST ಜನಸಂಖ್ಯೆ (ಲಕ್ಷಗಳಲ್ಲಿ) | ಯೋಜನೆಗಳಿಂದ ಲಾಭ ಪಡೆದವರು | ನೀಡಿದ ಆರ್ಥಿಕ ನೆರವು (ಕೋಟಿ ರೂ.) |
|---|---|---|---|---|
| 1 | 2010 | 40.8 | 18,200 | 115 |
| 2 | 2012 | 41.3 | 21,500 | 148 |
| 3 | 2015 | 42.0 | 27,800 | 205 |
| 4 | 2018 | 42.3 | 33,400 | 260 |
| 5 | 2020 | 42.5 | 37,900 | 310 |

ಮೂಲ: ಕರ್ನಾಟಕ ಸರ್ಕಾರದ ವಾರ್ಷಿಕ ವರದಿಗಳು.

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ವರ್ಷದಿಂದ ವರ್ಷಕ್ಕೆ ಫಲಾನುಭವಿಗಳ ಸಂಖ್ಯೆ ಹೆಚ್ಚುತ್ತಿರುವುದು ಕಂಡುಬರುತ್ತದೆ.

2010ರಲ್ಲಿ ಸುಮಾರು 18 ಸಾವಿರ ಫಲಾನುಭವಿಗಳಿದ್ದರೆ, 2020ರ ವೇಳೆಗೆ ಅದು 37 ಸಾವಿರಕ್ಕೂ ಹೆಚ್ಚು ಆಗಿದೆ. ಇದರಿಂದ ಅಭಿವೃದ್ಧಿ ನಿಗಮಗಳ ಕಾರ್ಯಪದ್ಧತಿ ವಿಸ್ತರಿಸುತ್ತಿರುವುದನ್ನು ಸೂಚಿಸುತ್ತದೆ.

**ಸಾಧಕಗಳು**

1. ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡಗಳ ಕಲ್ಯಾಣ ನೀತಿಗಳನ್ನು ಅನುಷ್ಠಾನಗೊಳಿಸುವಲ್ಲಿ ಅಭಿವೃದ್ಧಿ ನಿಗಮಗಳು ಮಹತ್ವದ ಪಾತ್ರ ವಹಿಸುತ್ತವೆ. ಈ ನಿಗಮಗಳ ಮೂಲಕ ಪರಿಶಿಷ್ಟ ಪಂಗಡ ಸಮುದಾಯಗಳ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಅನೇಕ ರೀತಿಯ ಸಕಾರಾತ್ಮಕ ಫಲಿತಾಂಶಗಳು ಕಂಡುಬರುತ್ತಿವೆ.
2. ಮೊದಲನೆಯದಾಗಿ, ಆರ್ಥಿಕ ಸಬಲೀಕರಣವು ಪ್ರಮುಖ ಸಾಧಕವಾಗಿದೆ. ಅಭಿವೃದ್ಧಿ ನಿಗಮಗಳ ಮೂಲಕ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲ ಮತ್ತು ಸಬ್ಸಿಡಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಕೃಷಿ, ಸಣ್ಣ

ಉದ್ಯಮಗಳು, ಸ್ವಯಂ ಉದ್ಯೋಗ ಹಾಗೂ ವ್ಯಾಪಾರ ಚಟುವಟಿಕೆಗಳಿಗೆ ನೆರವು ನೀಡುವ ಮೂಲಕ ಜನರು ಸ್ವಾವಲಂಬನೆಯತ್ತ ಸಾಗಲು ಸಾಧ್ಯವಾಗುತ್ತದೆ. ಇದರಿಂದ ಅವರ ಜೀವನಮಟ್ಟದಲ್ಲಿ ಸುಧಾರಣೆ ಕಾಣಿಸಿಕೊಳ್ಳುತ್ತದೆ ಮತ್ತು ಆರ್ಥಿಕ ಸ್ಥಿರತೆ ಹೆಚ್ಚಾಗುತ್ತದೆ.

3. ಎರಡನೆಯದಾಗಿ, ಶಿಕ್ಷಣಾಭಿವೃದ್ಧಿಯ ಕ್ಷೇತ್ರದಲ್ಲಿ ಮಹತ್ವದ ಪ್ರಗತಿ ಕಂಡುಬರುತ್ತಿದೆ. ಸರ್ಕಾರ ಮತ್ತು ಅಭಿವೃದ್ಧಿ ನಿಗಮಗಳು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಸತಿ ನಿಲಯಗಳು, ಉಚಿತ ಪಠ್ಯಪುಸ್ತಕಗಳು ಮತ್ತು ಇತರ ಶಿಕ್ಷಣ ಸಹಾಯಧನಗಳನ್ನು ಒದಗಿಸುತ್ತವೆ. ಇವುಗಳ ಪರಿಣಾಮವಾಗಿ ಪರಿಶಿಷ್ಟ ಪಂಗಡ ಸಮುದಾಯದ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮುಂದುವರಿಯಲು ಹೆಚ್ಚಿನ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಶಿಕ್ಷಣದ ಮೂಲಕ ಅವರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯಲ್ಲೂ ಸುಧಾರಣೆ ಸಂಭವಿಸುತ್ತದೆ.
4. ಮೂರನೆಯದಾಗಿ, ಉದ್ಯೋಗಾವಕಾಶಗಳ ಹೆಚ್ಚಳವೂ ಪ್ರಮುಖ ಸಾಧಕವಾಗಿದೆ. ಅಭಿವೃದ್ಧಿ ನಿಗಮಗಳು ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಆಯೋಜಿಸುವ ಮೂಲಕ ಯುವಕರಿಗೆ ಉದ್ಯೋಗಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಕಲಿಸುತ್ತವೆ. ಇದರಿಂದ ಅವರು ಉದ್ಯೋಗ ಪಡೆಯಲು ಅಥವಾ ಸ್ವಂತ ಉದ್ಯಮ ಆರಂಭಿಸಲು ಪ್ರೇರೇಪಿತರಾಗುತ್ತಾರೆ. ಪರಿಣಾಮವಾಗಿ, ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡುವಲ್ಲಿ ಸಹ ಸಹಾಯವಾಗುತ್ತದೆ.
5. ನಾಲ್ಕನೆಯದಾಗಿ, ಸಾಮಾಜಿಕ ಸಬಲೀಕರಣದ ದೃಷ್ಟಿಯಿಂದಲೂ ಅಭಿವೃದ್ಧಿ ನಿಗಮಗಳ ಪಾತ್ರ ಮಹತ್ವದ್ದಾಗಿದೆ. ಸರ್ಕಾರಿ ಯೋಜನೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳ ಮೂಲಕ ಪರಿಶಿಷ್ಟ ಪಂಗಡ ಸಮುದಾಯಗಳ ಸಾಮಾಜಿಕ ಸ್ಥಾನಮಾನದಲ್ಲಿ ಸುಧಾರಣೆ ಕಂಡುಬರುತ್ತಿದೆ. ಶಿಕ್ಷಣ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಜಾಗೃತಿ ಹೆಚ್ಚಾದಂತೆ ಸಮುದಾಯದ ಒಟ್ಟು ಅಭಿವೃದ್ಧಿಗೂ ಉತ್ತೇಜನ ದೊರೆಯುತ್ತದೆ.

**ಭಾದಕಗಳು**

1. ಅಭಿವೃದ್ಧಿ ನಿಗಮಗಳ ಮೂಲಕ ಹಲವು ಕಲ್ಯಾಣ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿದ್ದರೂ, ಅವುಗಳ ಕಾರ್ಯನಿರ್ವಹಣೆಯಲ್ಲಿ ಕೆಲವು ಸಮಸ್ಯೆಗಳು ಮತ್ತು ಸವಾಲುಗಳೂ ಕಾಣಿಸಿಕೊಳ್ಳುತ್ತವೆ.
2. ಮೊದಲನೆಯದಾಗಿ, ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಯೋಜನೆಗಳ ಬಗ್ಗೆ ಅರಿವು ಕಡಿಮೆಯಾಗಿರುವುದು ಪ್ರಮುಖ ಭಾದಕವಾಗಿದೆ. ಹಲವಾರು ಜನರಿಗೆ ಸರ್ಕಾರದ ಯೋಜನೆಗಳು ಮತ್ತು ಸೌಲಭ್ಯಗಳ ಬಗ್ಗೆ ಸರಿಯಾದ ಮಾಹಿತಿ ತಲುಪದೆ ಇರುವುದರಿಂದ ಅವರು ಅವುಗಳ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. ಮಾಹಿತಿ ಕೊರತೆ ಇರುವುದರಿಂದ ಯೋಜನೆಗಳ ಪರಿಣಾಮಕಾರಿತ್ವವೂ ಕಡಿಮೆಯಾಗುತ್ತದೆ.
3. ಎರಡನೆಯದಾಗಿ, ಕೆಲವೊಮ್ಮೆ ಆಡಳಿತಾತ್ಮಕ ವಿಳಂಬವೂ ಸಮಸ್ಯೆಯಾಗುತ್ತದೆ. ಅರ್ಜಿಗಳ ಪರಿಶೀಲನೆ, ಅನುಮೋದನೆ ಹಾಗೂ ಸೌಲಭ್ಯಗಳ ವಿತರಣೆ ಪ್ರಕ್ರಿಯೆಯಲ್ಲಿ ವಿಳಂಬವಾಗುವುದರಿಂದ ಫಲಾನುಭವಿಗಳು ಸಮಯಕ್ಕೆ ಸರಿಯಾಗಿ ನೆರವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಇದರಿಂದ ಜನರಲ್ಲಿ ಅಸಮಾಧಾನವೂ ಉಂಟಾಗುತ್ತದೆ.
4. ಮೂರನೆಯದಾಗಿ, ದೂರದ ಮತ್ತು ಅರಣ್ಯ ಪ್ರದೇಶಗಳಿಗೆ ಯೋಜನೆಗಳ ಪ್ರಾಪ್ಯತೆ ಕಡಿಮೆಯಾಗಿರುವುದು ಇನ್ನೊಂದು ಸವಾಲಾಗಿದೆ. ಪರಿಶಿಷ್ಟ ಪಂಗಡದ ಜನರು ಹೆಚ್ಚಾಗಿ ವಾಸಿಸುವ ಕೆಲವು ಪ್ರದೇಶಗಳು ಭೌಗೋಳಿಕವಾಗಿ ದೂರದಲ್ಲಿರುವುದರಿಂದ

ಸರ್ಕಾರದ ಯೋಜನೆಗಳು ಸಂಪೂರ್ಣವಾಗಿ ತಲುಪುವಲ್ಲಿ ಅಡಚಣೆಗಳು ಎದುರಾಗುತ್ತವೆ.

5. ನಾಲ್ಕನೆಯದಾಗಿ, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಕೆಲವೊಮ್ಮೆ ಪಾರದರ್ಶಕತೆ ಕೊರತೆಯಿರುವುದೂ ಗಮನಾರ್ಹವಾಗಿದೆ. ಸರಿಯಾದ ಮಾನದಂಡಗಳ ಪ್ರಕಾರ ಆಯ್ಕೆ ನಡೆಯದಿದ್ದರೆ ಅರ್ಹ ವ್ಯಕ್ತಿಗಳಿಗೆ ಸೌಲಭ್ಯಗಳು ಸಿಗದೇ ಹೋಗುವ ಸಾಧ್ಯತೆ ಇದೆ. ಆದ್ದರಿಂದ ಆಯ್ಕೆ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕ ಮತ್ತು ನ್ಯಾಯಸಮ್ಮತವಾಗಿ ನಡೆಸುವ ಅಗತ್ಯವಿದೆ.

ಒಟ್ಟಾರೆ, ಅಭಿವೃದ್ಧಿ ನಿಗಮಗಳು ಪರಿಶಿಷ್ಟ ಪಂಗಡ ಸಮುದಾಯಗಳ ಅಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತಿದ್ದರೂ, ಮೇಲ್ಕಂಡ ಸವಾಲುಗಳನ್ನು ಸರಿಪಡಿಸುವ ಮೂಲಕ ಅವುಗಳ ಕಾರ್ಯಕ್ಷಮತೆಯನ್ನು ಇನ್ನಷ್ಟು ಹೆಚ್ಚಿಸಬಹುದು. ಇದರಿಂದ ಕಲ್ಯಾಣ ಯೋಜನೆಗಳ ಲಾಭಗಳು ನಿಜವಾದ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಲು ಸಾಧ್ಯವಾಗುತ್ತದೆ.

**ಸಮಾರೋಪ**

ಈ ಲೇಖನವು ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ನೀತಿಗಳ ಅನುಷ್ಠಾನದಲ್ಲಿ ಅಭಿವೃದ್ಧಿ ನಿಗಮಗಳ ಮಹತ್ವವನ್ನು ಕರ್ನಾಟಕದ ಉದಾಹರಣೆಯ ಮೂಲಕ ವಿಶ್ಲೇಷಿಸಿದೆ. ಅಧ್ಯಯನದಿಂದ ತಿಳಿದುಬರುವಂತೆ, ಪರಿಶಿಷ್ಟ ಪಂಗಡ ಸಮುದಾಯಗಳು ಇತಿಹಾಸಾತ್ಮಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ದೀರ್ಘಕಾಲದಿಂದ ಅಭಿವೃದ್ಧಿಯ ಮುಖ್ಯವಾಹಿನಿಯಿಂದ ದೂರ ಉಳಿದಿದ್ದರೂ, ಸರ್ಕಾರ ರೂಪಿಸಿರುವ ಕಲ್ಯಾಣ ನೀತಿಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಅವರ ಸಮಗ್ರ ಅಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತಿವೆ. ವಿಶೇಷವಾಗಿ ಅಭಿವೃದ್ಧಿ ನಿಗಮಗಳು ಸರ್ಕಾರದ ಕಲ್ಯಾಣ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸುವಲ್ಲಿ ಪ್ರಮುಖ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸ್ವಯಂ ಉದ್ಯೋಗ ಯೋಜನೆಗಳು, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆಗಳು ಮುಂತಾದ ಕಾರ್ಯಕ್ರಮಗಳ ಮೂಲಕ ಪರಿಶಿಷ್ಟ ಪಂಗಡ ಸಮುದಾಯಗಳ ಆರ್ಥಿಕ ಸಬಲೀಕರಣವನ್ನು ಉತ್ತೇಜಿಸಲು ಪ್ರಯತ್ನಿಸಲಾಗಿದೆ. ಈ ಯೋಜನೆಗಳು ಫಲಾನುಭವಿಗಳ ಜೀವನಮಟ್ಟವನ್ನು ಸುಧಾರಿಸುವುದಲ್ಲದೆ, ಅವರಿಗೆ ಸ್ವಾವಲಂಬನೆ ಹಾಗೂ ಉದ್ಯಮಶೀಲತೆಯ ದಾರಿಯನ್ನು ತೆರೆದಿವೆ. ಅಧ್ಯಯನದಲ್ಲಿ ನೀಡಿರುವ ದತ್ತಾಂಶಗಳ ಪ್ರಕಾರ ವರ್ಷದಿಂದ ವರ್ಷಕ್ಕೆ ಯೋಜನೆಗಳಿಂದ ಲಾಭ ಪಡೆಯುವವರ ಸಂಖ್ಯೆಯಲ್ಲಿ ಏರಿಕೆ ಕಂಡುಬರುತ್ತಿರುವುದು ಗಮನಾರ್ಹವಾಗಿದೆ. ಇದು ಅಭಿವೃದ್ಧಿ ನಿಗಮಗಳ ಕಾರ್ಯಚಟುವಟಿಕೆಗಳು ಕ್ರಮೇಣ ವಿಸ್ತರಿಸುತ್ತಿರುವುದನ್ನು ಸೂಚಿಸುತ್ತದೆ. ಸಾಲ, ಸಹಾಯಧನ, ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಪರಿಶಿಷ್ಟ ಪಂಗಡ ಸಮುದಾಯಗಳ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಬರುತ್ತಿದೆ. ಕಲ್ಯಾಣ ಯೋಜನೆಗಳ ಅನುಷ್ಠಾನದಲ್ಲಿ ಕೆಲವು ಸವಾಲುಗಳೂ ಮುಂದುವರಿದಿವೆ. ಗ್ರಾಮೀಣ ಹಾಗೂ ಅರಣ್ಯ ಪ್ರದೇಶಗಳಲ್ಲಿ ಮಾಹಿತಿ ಕೊರತೆ, ಆಡಳಿತಾತ್ಮಕ ವಿಳಂಬ, ಭೌಗೋಳಿಕ ಅಡೆತಡೆಗಳು ಮತ್ತು ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆಯ ಸಮಸ್ಯೆಗಳು ಯೋಜನೆಗಳ ಪರಿಣಾಮಕಾರಿತ್ವವನ್ನು ಕಡಿಮೆ ಮಾಡುತ್ತವೆ. ಈ ಕಾರಣಗಳಿಂದಾಗಿ ಕೆಲವು ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಲಾಭ ಸಂಪೂರ್ಣವಾಗಿ ತಲುಪದೇ ಇರುವ ಸಾಧ್ಯತೆಯೂ ಕಂಡುಬರುತ್ತದೆ. ಹೀಗಾಗಿ ಅಭಿವೃದ್ಧಿ ನಿಗಮಗಳ ಕಾರ್ಯಕ್ಷಮತೆಯನ್ನು ಇನ್ನಷ್ಟು ಬಲಪಡಿಸುವುದು ಅತ್ಯಂತ ಅಗತ್ಯವಾಗಿದೆ. ಯೋಜನೆಗಳ ಬಗ್ಗೆ ಜನಜಾಗೃತಿ ಹೆಚ್ಚಿಸುವುದು, ಆಡಳಿತಾತ್ಮಕ ಪ್ರಕ್ರಿಯೆಯನ್ನು ಸರಳೀಕರಿಸುವುದು, ತಂತ್ರಜ್ಞಾನವನ್ನು

ಬಳಸಿಕೊಂಡು ಪಾರದರ್ಶಕತೆಯನ್ನು ಹೆಚ್ಚಿಸುವುದು ಹಾಗೂ ದೂರದ ಪ್ರದೇಶಗಳಿಗೆ ಯೋಜನೆಗಳ ಪ್ರಾಪ್ಯತೆಯನ್ನು ವಿಸ್ತರಿಸುವುದು ಮುಖ್ಯ ಕ್ರಮಗಳಾಗಿವೆ.

ಒಟ್ಟಾರೆ, ಅಭಿವೃದ್ಧಿ ನಿಗಮಗಳು ರಾಜ್ಯ ಸರ್ಕಾರದ ಪರಿಶಿಷ್ಟ ಪಂಗಡ ಕಲ್ಯಾಣ ನೀತಿಗಳ ಅನುಷ್ಠಾನದಲ್ಲಿ ಮಹತ್ವದ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಪರಿಣಾಮಕಾರಿ ಕಾರ್ಯಚಟುವಟಿಕೆಗಳು ಪರಿಶಿಷ್ಟ ಪಂಗಡ ಸಮುದಾಯಗಳ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಉತ್ತೇಜನ ನೀಡುವುದರ ಜೊತೆಗೆ ಸಮಾನತೆಯ ಹಾಗೂ ಸಾಮಾಜಿಕ ನ್ಯಾಯದ ಗುರಿಗಳನ್ನು ಸಾಧಿಸಲು ಸಹ ಸಹಾಯಕವಾಗುತ್ತವೆ. ಆದ್ದರಿಂದ ಅಭಿವೃದ್ಧಿ ನಿಗಮಗಳ ಕಾರ್ಯಪದ್ಧತಿಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರೂಪಿಸುವುದು ಪರಿಶಿಷ್ಟ ಪಂಗಡ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಅವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- Government of India. (2011). *Census of India 2011*. Ministry of Home Affairs.
- Government of India. (2011). *Census of India 2011: Scheduled tribes population data*. Office of the Registrar General & Census Commissioner.
- Government of Karnataka. (2020). *Annual report of the Scheduled Tribes Welfare Department*. Government of Karnataka.
- Government of Karnataka. (2022). *Annual report of the Department of Scheduled Tribes Welfare*. Government of Karnataka.
- Government of Karnataka. (2023). *Maharshi Valmiki Scheduled Tribes Development Corporation: Annual report*. Government of Karnataka.
- Ministry of Tribal Affairs. (2019). *Tribal development policies in India*. Government of India.
- Ministry of Tribal Affairs. (2021). *Tribal development programmes in India*. Government of India.
- Planning Commission. (2013). *Tribal sub-plan and development programmes in India*. Government of India.
- Sharma, K. L. (2017). *Social stratification in India*. Sage Publications.
- Sharma, R. K. (2018). *Social change and tribal development in India*. Sage Publications.
- Singh, K. S. (2019). *Tribal society in India: Issues and development*. Oxford University Press.
- Singh, R. (2018). *Tribal development in India*. Rawat Publications.